**ಸತ್ರ ಮೊಕದ್ದಮೆ ಸಂ. 15/2022**

**ಪ್ರಾಸಾ-5**

ದಿಃ 06.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ. ವಿ ಎಸ್ ಎಂ ವಕೀಲರಿಂದ** ಆರೋಪಿತರ ಪರ

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಒಕ್ಕಲುತನ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇನೆ. ಘಟನೆ ಯಾವ ದಿನಾಂಕ ಆಗಿರುತ್ತದೆ ಎಂದು ನನಗೆ ನಿಖರವಾಗಿ ದಿನಾಂಕ ಹೇಳಲು ಆಗುವುದಿಲ್ಲ. ಘಟನೆ ಆಗುವ ಮುನ್ನ ನಾನು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿರಲಿಲ್ಲ ಮತ್ತು ನನಗೆ ಅವರ ಪರಿಚಯ ಇರಲಿಲ್ಲ. ಈ ಪ್ರಕರಣದ ವಿಚಾರವಾಗಿ ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ.

2. ಜಡ್ರಾಮಕುಂಟಿ ಗ್ರಾಮದಿಂದ ಬೆಣ್ಣೂರ ಗ್ರಾಮಕ್ಕೆ ಸುಮಾರು 7 ಕಿ.ಮೀ ಅಂತರ ಇರುತ್ತದೆ. ನಾನು ಮತ್ತು ಮೃತ ನಾಗಪ್ಪ ಬೆಣ್ಣೂರ ಗ್ರಾಮದಲ್ಲಿರುವ ಆರೋಪಿ/ಬಸಪ್ಪ ರವರ ಮನೆಗೆ ಸಂಜೆ ಸುಮಾರು 4-30 ಗಂಟೆಗೆ ಹೋಗಿರುತ್ತೇವೆ. ಆರೋಪಿತರ ಊರಾದ ಬೆಣ್ಣೂರ ಗ್ರಾಮಕ್ಕೆ ಸುಮಾರು 5 ಗಂಟೆಗೆ ತಲುಪಿರುತ್ತೇವೆ. ಘಟನೆ ಆಗಿದೆ ಎಂದು ಹೇಳುವ ಸ್ಥಳದಲ್ಲಿ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ಹಾಗೆಯೆ ಸದರಿ ಸ್ಥಳದ ಹತ್ತಿರ ಸರ್ಕಾರಿ ಶಾಲೆ ಇರುತ್ತದೆ ಎಂದರೆ ಸರಿ.

3. ಆರೋಪಿತರಿಗೂ ಮತ್ತು ಯಮನಪ್ಪನಿಗೂ ಜಗಳ ಆಗುತ್ತಿದ್ದಾಗ ನಾನು ಸಹ ಪಕ್ಕದಲ್ಲಿಯೆ ನಿಂತಿದ್ದೆ. ಸದರಿ ಗಲಾಟೆ ಸಮಯದಲ್ಲಿ ಬೆಣ್ಣೂರ ಗ್ರಾಮದ ಸುಮಾರು 10 ರಿಂದ 15 ಜನ ಸಾರ್ವಜನಿಕರು ಸ್ಥಳಕ್ಕೆ ಬಂದಿದ್ದರು. 1 ನೇ ಆರೋಪಿ ಬಸಪ್ಪ ಮೃತ ಯಮನಪ್ಪನಿಗೆ ಕಲ್ಲಿನಿಂದ ತಲೆಗೆ ಹೊಡೆದಿರುತ್ತಾನೆ. ರಸ್ತೆಯ ಮೇಲೆ ಇದ್ದ ಕಲ್ಲನ್ನು 1 ನೇ ಆರೋಪಿ ಎತ್ತಿಕೊಂಡು ಯಮನಪ್ಪನಿಗೆ ಹೊಡೆದಿರುತ್ತಾನೆ, 2 ನೇ ಆರೋಪಿ ತನ್ನ ಕೈಯಲ್ಲಿದ್ದ ಪಿಕಾಸಿ ಕಾವಿನಿಂದ ಯಮನಪ್ಪನ ತಲೆಗೆ ಹೊಡೆದಿರುತ್ತಾನೆ. ಕಲ್ಲು ಮತ್ತು ಪಿಕಾಸಿ ಕಾವನ್ನು ಆರೋಪಿತರು ಎಲ್ಲಿಂದ ತೆಗೆದುಕೊಂಡು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಯಮನಪ್ಪನಿಗೆ ಆರೋಪಿತರು ಹಲ್ಲೆ ಮಾಡಿದ ನಂತರ ಮೂರ್ಚೆ ಹೋಗಿರುತ್ತದೆ. ಊರಿನವರು ಆ ಸಮಯದಲ್ಲಿ ನನಗೆ ಯಮನಪ್ಪ ರವರನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಲು ಸಹಾಯ ಮಾಡಿರುವುದಿಲ್ಲ. ಬೆಣ್ಣೂರ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ಇರುತ್ತದೆ. ಆರೋಪಿತರು ಯಮನಪ್ಪನಿಗೆ ಹಲ್ಲೆ ಮಾಡಿದ ವಿಚಾರವಾಗಿ ನಾನು ಚಾಸಾ-16/ಯಮನಪ್ಪ ತೇಜಿ ರವರಿಗೆ ಕರೆ ಮಾಡಿ ತಿಳಿಸಿರುತ್ತೇನೆ. ನಾನು ಚಾಸಾ-16 ರವರಿಗೆ ಕರೆ ಮಾಡಿದ ನಂತರ ಸುಮಾರು ಅರ್ಧ ಗಂಟೆ ನಂತರ ಚಾಸಾ-16 ತನ್ನ ಬಲೆರೊ ವಾಹನದಲ್ಲಿ ಚಾಲಕನ ಜೊತೆ

ಬಂದಿದ್ದರು.  ಚಾಸಾ-16 ರವರು ಘಟನಾ ಸ್ಥಳಕ್ಕೆ ಬಂದಿದ್ದಾಗ ಯಮನಪ್ಪ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಬೆಣ್ಣೂರು ಗ್ರಾಮದ ಊರಿನವರು ಯಮನಪ್ಪನನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿರುವುದಿಲ್ಲ. ನಾವು ಯಮನಪ್ಪನನ್ನು ಆತನ ಮನೆಗೆ ಕರೆದುಕೊಂಡು ಹೋಗಿರುತ್ತೇವೆ. ಸಾಮಾನ್ಯವಾಗಿ ಯಾರಿಗಾದರೂ ತಲೆಗೆ ಪೆಟ್ಟಾಗಿದರೆ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗುತ್ತದೆ ಎಂದರೆ ಸರಿ. ಘಟನೆ ಆದ ಮರುದಿನ ಯಮನಪ್ಪನನ್ನು ಕಟ್ಟಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಯಿತು. ಯಮನಪ್ಪನನ್ನು ಆತನ ಮನೆಗೆ ಕರೆದುಕೊಂಡು ಹೋದ ನಂತರ ಆತನು ಓಡಾಡುವ ಸ್ಥಿತಿಯಲ್ಲಿ ಇದ್ದನು ಎಂದರೆ ಸರಿಯಲ್ಲ.

4. ನಾನು ಮತ್ತು ಮೃತ ಯಮನಪ್ಪ ನನ್ನ ದ್ವಿಚಕ್ರ ವಾಹನದಲ್ಲಿ ಬೆಣ್ಣೂರು ಗ್ರಾಮದ ಆರೋಪಿ/ ಬಸಪ್ಪ ರವರ ಮನೆ ಹತ್ತಿರ ಹೋಗಿರುವುದಿಲ್ಲ ಮತ್ತು ಆರೋಪಿತರು ಯಮನಪ್ಪನಿಗೆ ಯಾವುದೇ ರೀತಿ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.  ಪಂಚನಾಮೆ ಬರೆಯಲು ನಾನು ಪೊಲೀಸರಿಗೆ ಮಾಹಿತಿ ನೀಡಿರುವುದಿಲ್ಲ. ಆದರೆ ಸ್ಥಳವನ್ನು ತೋರಿಸಿರುತ್ತೇನೆ. ಪೊಲೀಸರು ಪಂಚನಾಮೆ ಮೇಲೆ ನನ್ನ ಸಹಿ ಪಡೆದುಕೊಂಡಿರುವುದಿಲ್ಲ. ಪೊಲೀಸರು ಜಪ್ತಿ ಪಡಿಸಿಕೊಂಡ ಕಲ್ಲು ಮತ್ತು ಪಿಕಾಸಿ ಕಾವಿನ ಮೇಲೆ ರಕ್ತದ ಕಲೆಗಳು ಇತ್ತೊ ಇಲ್ಲವೊ ಎಂದು ನಾನು ಗಮನಿಸಿರುವುದಿಲ್ಲ. ಸಾಮಾನ್ಯವಾಗಿ ಮುದ್ದೆ ಮಾಲು-3 ಊರಿನಲ್ಲಿ ಎಲ್ಲರ ಮನೆಯಲ್ಲಿ ಇರುತ್ತವೆ ಎಂದರೆ ಸರಿ. ಪೊಲೀಸರಿಗೆ ನಾನು ಯಾವುದೇ ಘಟನಾ ಸ್ಥ್ಳ ತೋರಿಸಿರವುದಿಲ್ಲ ಮತ್ತು ಪೊಲೀಸರು ಸ್ಥಳದಿಂದ ಯಾವುದೇ ವಸ್ತು ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ನಾಗಪ್ಪ ನನ್ನ ಸ್ನೇಹಿತನಾಗಿದ್ದು ಅವರ ಮನೆಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ.